ಎಸ್. ಸೂರ್ಯಪ್ರಕಾಶ ಪಂಡಿತ್



# ನಿನ್ನ ಉದ್ಧಾರವಾಗಲಿ ಮೊದಲು

ಜೆಯೂನ್ ಎಂಬ ಝೆನ್‌ಗುರು ಅಸಾಧಾರಣ ಸಂಸ್ಕೃತವಿದ್ವಾಂಸನೂ ಹೌದು. ಅವನು ತಾರುಣ್ಯದಲ್ಲಿದ್ದಾಗ ಸಹಾಧ್ಯಾಯಿಗಳಿಗೆ ಪ್ರವಚನಗಳನ್ನು ಕೊಡುತ್ತಿದ್ದನಂತೆ. ಈ ವಿಷಯ ಅವನ ತಾಯಿಗೆ ತಿಳಿಯಿತು. ಆಗ ಅವಳು ಮಗನಿಗೊಂದು ಪತ್ರವನ್ನು ಬರೆದಳು; ಅದರ ಸಾರಾಂಶ ಹೀಗೆ:

'ಮಗನೇ, ನನ್ನ ಪ್ರಕಾರ ನೀನು ಬುದ್ಧನ ಅನುಯಾಯಿ ಅಲ್ಲ; ಬೇರೊಬ್ಬರ ಪ್ರಯೋಜನಕ್ಕಾಗಿರುವ ನಡೆದಾಡುವ ಶಬ್ದಕೋಶವಷ್ಟೆ ನೀನು. ವಿಷಯಸಂಗ್ರಹಣೆಗೆ, ಮಾಹಿತಿಗೆ, ವ್ಯಾಖ್ಯಾನಕ್ಕೆ, ಕೀರ್ತಿಗೆ, ಪ್ರಸಿದ್ಧಿಗೆ ಕೊನೆ ಎಂಬುದೇ ಇರದು. ನೀನು ಪ್ರವಚನ ನೀಡುವ ವ್ಯಾಪಾರವನ್ನು ನಿಲ್ಲಿಸುವೆ ಎಂದು ಆಶಿಸುವೆ. ದೂರದ ಪರ್ವತದ ಆಚೆಗಿರುವ ಆಲಯಕ್ಕೆ ತೆರಳು. ಧ್ಯಾನದಲ್ಲಿ ತೊಡಗು; ಜ್ಞಾನೋದಯಕ್ಕೆ ಇದೊಂದೇ ದಾರಿ.'

★★★

**ಇದೊಂದು ಮಾರ್ಮಿಕವಾದ ಪ್ರಸಂಗ. ಇದು ಅಧ್ಯಾತ್ಮದ ಸಂದರ್ಭದಲ್ಲಿ ಮಾತ್ರವೇ ಸಲ್ಲುವಂಥ ಉದಾಹರಣೆ ಎಂದು ಮೇಲ್ನೋಟಕ್ಕೆ ಅನಿಸೀತು. ಆದರೆ ಇದು ನಮ್ಮ ನಿತ್ಯದ ಜೀವನಕ್ಕೂ ಸಲ್ಲುವ ದೃಷ್ಟಾಂತಕಥೆಯಾಗಿದೆ.**